ಕರ್ನಾಟಕ ವಿಧಾನ ಪರಿಷತ್

1). ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	700
2). ಸದಸ್ಯರ ಹೆಸರು	:	ಶ್ರೀಮತಿ ಎಸ್. ವೀಣಾ ಅಚ್ಚಯ್ಯ (ವಿಧಾನ ಸಭೆಯಿಂದ ಚುನಾಯಿತರಾದವರು)
3). ಉತ್ತರಿಸುವ ದಿನಾಂಕ	:	04.03.2021
4). ಉತ್ತರಿಸುವ ಸಚಿವರು	:	ಮಾನ್ಯ ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಸಚಿವರು

ಕ್ರ.ಸಂ	ಪ್ರಶ್ನೆ	ಉತ್ತರ
(ಅ)	ರಾಜ್ಯದಲ್ಲಿ, 2016-17 ರಿಂದ 2020-21 ರವರೆಗೆ ಮಾನ್ಯ ಶಾಸಕರ ಸ್ಥಳೀಯ ಪ್ರದೇಶಾಭಿವೃದ್ಧಿ ಯೋಜನೆಗೆ ಸಂಬಂಧಿಸಿದಂತೆ ಪ್ರತಿವರ್ಷಕ್ಕೆ ನಿಗದಿಯಾಗಿರುವ ರೂ.2.00 ಕೋಟಿಗಳ ಅನುದಾನವನ್ನು ಎಲ್ಲಾ ಮಾನ್ಯ ಶಾಸಕರುಗಳು ಸೂಚಿಸಿರುವ ಕಾಮಗಾರಿಗಳಿಗೆ ಒದಗಿಸಲಾಗಿದೆಯೇ; (ವರ್ಷವಾರು ವಿವರ ನೀಡುವುದು).	ಹೌದು ಒದಗಿಸಲಾಗಿದೆ. ಮಾನ್ಯ ಶಾಸಕರ ಪ್ರದೇಶಾಬಿವೃದ್ಧಿ ಯೋಜನೆಗೆ ಸಂಬಂಧಿಸಿದಅನುದಾನಕ್ಕೆ ಕ್ರಿಯಾ ಯೋಜನೆಯನ್ನು ರೂಪಿಸಿ ಅನುಮೋದನೆಯನ್ನು ಆಯಾ ಜಿಲ್ಲೆಯ ಜಿಲ್ಲಾಧಿಕಾರಿಗಳೇ ನೀಡುತ್ತಾರೆ. 2016-17, 2017-18ನೇ ಸಾಲುಗಳಲ್ಲಿ ನಾಲ್ಕು ಕಂತುಗಳನ್ನು ಪೂರ್ಣವಾಗಿ ಬಿಡುಗಡೆಗೊಳಿಸಲಾಗಿದೆ. 2018-19ನೇ ಸಾಲಿನಲ್ಲಿ ಮೂರು ಕಂತುಗಳನ್ನು ಪೂರ್ಣವಾಗಿ ಬಿಡುಗಡೆಗೊಳಿಸಲಾಗಿದ್ದು, ಜಿಲ್ಲಾಧಿಕಾರಿಗಳ ಪಿ.ಡಿ. ಖಾತೆಯಲ್ಲಿ ರೂ.830.67 ಕೋಟಿಗಳ ಅನುದಾನ ಫೆಬ್ರುವರಿ-2019ರ ಅಂತ್ಯದವರೆಗೆ ಇರುವ ಕಾರಣ ನಾಲ್ಕನೆಯ ಕಂತಿನ ಅನುದಾನದಲ್ಲಿ ರೂ.32.02 ಕೋಟಿಗಳನ್ನು ಮಾತ್ರ SCP/TSP ಬಾಬ್ತು ಬಿಡುಗಡೆಮಾಡಲಾಗಿದೆ. ಉಳಿದ ರೂ.127.69 ಕೋಟಿಗಳನ್ನು ಬಿಡುಗಡೆಯಾಗಿರುವುದಿಲ್ಲ. 2019-20ನೇ ಸಾಲಿನಲ್ಲಿ ಜಿಲ್ಲಾಧಿಕಾರಿಗಳ ಪಿ.ಡಿ.ಖಾತೆಯಲ್ಲಿ ರೂ.751.16 ಕೋಟಿಗಳ ಅನುದಾನ ಫೆಬ್ರುವರಿ-2020ರ ಅಂತ್ಯದವರೆಗೆ ಇರುವ ಕಾರಣ. ಮೂರು ಮತ್ತು ನಾಲ್ಕನೆಯ ಕಂತಿನ ಅನುದಾನವನ್ನು ಬಿಡುಗಡೆ ಮಾಡಲು ಸಾಧ್ಯವಾಗಿರುವುದಿಲ್ಲ. 2019-20ನೇ ಸಾಲುಗಳಲ್ಲಿ **ಪ್ರತಿ ಕ್ಷೇತ್ರಕ್ಕೆ ರೂ.2.00 ಕೋಟಿಗಳಂತೆ ಕ್ರಿಯಾ ಯೋಜನೆ ರೂಪಿಸಲು ಸರ್ಕಾರ ಅನುಮತಿ** ನೀಡಿರುತ್ತದೆ. 2020-21ನೇ ಸಾಲಿನಲ್ಲಿ ರೂ.1.00 ಕೋಟಿಗಳಿಗೆ ಕ್ರಿಯಾ ಯೋಜನೆ ರೂಪಿಸಲು ಜಿಲ್ಲಾಧಿಕಾರಿಗಳಿಗೆ ಸರ್ಕಾರವು ನಿರ್ದೇಶನ ನೀಡಲಾಗಿರುತ್ತದೆ. ಆದರೆ, ಪ್ರಸ್ತುಕ ಸಾಲಿನಲ್ಲಿ ಈವರೆವಿಗೂ ಪ್ರತಿ ಕ್ಷೇತ್ರಕ್ಕೆ ರೂ.1.50 ಕೋಟಿ ಅನುದಾನವನ್ನು ಬಿಡುಗಡೆ ಮಾಡಲಾಗಿದೆ.

(ಆ)	ಮೇಲಿನ ಯಾವ ಆರ್ಥಿಕ ವರ್ಷಗಳಲ್ಲಿ ಕಡಿಮೆ ಅನುದಾನ ಬಿಡುಗಡೆಯಾಗಿದೆ; ಕಡಿಮೆ ಅನುದಾನ ಒದಗಿಸಿದ ಆರ್ಥಿಕ ವರ್ಷಗಳಲ್ಲಿ ಜಿಲ್ಲಾಧಿಕಾರಿಗಳ ಪಿ.ಡಿ.ಖಾತೆಯಲ್ಲಿ ಇರುವ ಅನುದಾನವನ್ನು ಬಳಸಿ ಮಾನ್ಯ ಶಾಸಕರುಗಳು ಸೂಚಿಸಿರುವ ರೂ.2.00 ಕೋಟಿಗಳ ಕಾಮಗಾರಿಗಳನ್ನು ಅನುಷ್ಠಾನಗೊಳಿಸುವಂತೆ ಆದೇಶಿಸಲಾಗಿದೆಯೇ;	2018-19ನೇ ಸಾಲಿನಲ್ಲಿ ಮೂರು ಕಂತುಗಳನ್ನು ಪೂರ್ಣವಾಗಿ ಬಿಡುಗಡೆಗೊಳಿಸಲಾಗಿದ್ದು, ನಾಲ್ಕನೆಯ ಕಂತಿನಲ್ಲಿ SCP/TSP ಅನುದಾನ ರೂ.32.02 ಕೋಟಿಗಳನ್ನು ಮಾತ್ರ ಬಿಡುಗಡೆಮಾಡಲಾಗಿದೆ. ಬಂಡವಾಳ ಲೆಕ್ಕಶೀರ್ಷಿಕೆಯಡಿ ರೂ.127.69 ಕೋಟಿಗಳನ್ನು ಬಿಡುಗಡೆಮಾಡಿರುವುದಿಲ್ಲ. 2019-20ನೇ ಸಾಲಿನಲ್ಲಿ ಮೊದಲನೆಯ ಕಂತನ್ನು ಎಲ್ಲಾ ಕ್ಷೇತ್ರಗಳಿಗೂ ತಲಾ ರೂ.50.00 ಲಕ್ಷಗಳಂತೆ ಬಿಡುಗಡೆ ಮಾಡಲಾಗಿದ್ದು, ಪ್ರಗತಿಯನ್ನಾಧಿರಿಸಿ 13 ಜಿಲ್ಲೆಗಳಿಗೆ ಮಾತ್ರ ಎರಡನೆಯ ಕಂತಿನ ಅನುದಾನವನ್ನು ಪೂರ್ಣವಾಗಿ ಬಿಡುಗಡೆಮಾಡಲಾಗಿದೆ. ಉಳಿದ 18 ಜಿಲ್ಲೆಗಳಲ್ಲಿ ಲಭ್ಯವಿರುವ ಅನುದಾನ ಶೇ 75 ರಷ್ಟು ವೆಚ್ಚ ಮಾಡದೆ ಇರುವುದರಿಂದ ಎರಡನೆ ಕಂತಿನಲ್ಲಿ ಎಸ್.ಸಿ.ಪಿ/ಟಿ.ಎಸ್.ಪಿ ಅನುದಾನವನ್ನು ಮಾತ್ರ ರೂ.32.02 ಕೋಟಿಗಳನ್ನು ಬಿಡುಗಡೆ ಮಾಡಲಾಗಿದೆ. ಜಿಲ್ಲಾಧಿಕಾರಿಗಳ ಪಿ.ಡಿ.ಖಾತೆಯಲ್ಲಿ ಲಭ್ಯವಿರುವ ಅನುದಾನವನ್ನು ಬಳಿಸಿ ಮಾನ್ಯ ಶಾಸಕರುಗಳು ಸೂಚಿಸಿರುವ ರೂ.2.00 ಕೋಟಿಗಳ ಕಾಮಗಾರಿಗಳಿಗೆ ಅನುಮೋದನೆ ನೀಡಲು ದಿನಾಂಕ:04.02.2020ರಂದು ಮಾನ್ಯ ಮುಖ್ಯಮಂತ್ರಿಯವರು ಮತ್ತು ದಿನಾಂಕ:23.06.2020ರಂದು ಸರ್ಕಾರದ ಮುಖ್ಯ ಕಾರ್ಯದರ್ಶಿಯವರು ಪತ್ರ ಮೂಲಕ ಸೂಚನೆ ನೀಡಿರುತ್ತಾರೆ.
(ಇ)	ಆದೇಶಿಸಿದ್ದಲ್ಲಿ, 2018-19, 2019-20ನೇ ಸಾಲಿನಲ್ಲಿ ಜಿಲ್ಲಾಧಿಕಾರಿಗಳ ಪಿ.ಡಿ.ಖಾತೆಯಲ್ಲಿ ಬಾಕಿ ಇರುವ ಅನುದಾನವನ್ನು ಬಳಸಿಕೊಂಡು ಮಾನ್ಯ ಶಾಸಕರುಗಳು ಸೂಚಿಸಿರುವ ರೂ.2.00 ಕೋಟಿ ಮೊತ್ತದ ಕಾಮಗಾರಿಗಳಿಗೆ ಅನುದಾನ ಒದಗಿಸಲಾಗಿದೆಯೇ; ಸದರಿ ಸಾಲಿನಲ್ಲಿ ಜಿಲ್ಲಾಧಿಕಾರಿಗಳ ಪಿ.ಡಿ.ಖಾತೆಯಲ್ಲಿ ಬಾಕಿ ಇದ್ದ ಅನುದಾನವೆಷ್ಟು? (ಜಿಲ್ಲಾವಾರು, ವರ್ಷವಾರು ಮಾಹಿತಿ ನೀಡುವುದು).	2018-19ನೇ ಸಾಲಿನಲ್ಲಿ ಮಾರ್ಚ್-2019ರ ಅಂತ್ಯಕ್ಕೆ ಜಿಲ್ಲಾಧಿಕಾರಿಗಳ ಪಿ.ಡಿ.ಖಾತೆಯಲ್ಲಿ ರೂ.948.97 ಕೋಟಿಗಳು ಹಾಗೂ 2019-20ನೇ ಸಾಲಿನಲ್ಲಿ ಮಾರ್ಚ್-2020ರ ಅಂತ್ಯಕ್ಕೆ ಜಿಲ್ಲಾಧಿಕಾರಿಗಳ ಪಿ.ಡಿ.ಖಾತೆಯಲ್ಲಿ ರೂ.672.55 ಕೋಟಿಗಳ ಅನುದಾನ ಲಭ್ಯವಿರುತ್ತದೆ(ಅನುಬಂಧ-1ರಲ್ಲಿ ಜಿಲ್ಲಾವಾರು ಮಾಹಿತಿ ನೀಡಲಾಗಿದೆ). ಲಭ್ಯವಿರುವ ಅನುದಾನದಲ್ಲಿ ಮಾನ್ಯ ಶಾಸಕರು ಸೂಚಿಸಿರುವ ಕಾಮಗಾರಿಗಳಿಗೆ ಜಿಲ್ಲಾಧಿಕಾರಿಗಳ ಪಿ.ಡಿ.ಖಾತೆಯಲ್ಲಿ ಬಾಕಿ ಇರುವ ಅನುದಾನವನ್ನು ಬಳಸಿಕೊಳ್ಳಲು ದಿನಾಂಕ:9.12.2019ರಂದು ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಯವರು ಎಲ್ಲಾ ಜಿಲ್ಲಾಧಿಕಾರಿಗಳಿಗೆ ಅರೆ ಸರ್ಕಾರ ಪತ್ರದ ಮೂಲಕ ಸೂಚಿಸಿರುತ್ತಾರೆ.

ಸಂಖ್ಯೆ: ಪಿಡಿಎಸ್ 19ಕೆಎಲ್ಎಸ್ 2021

(ಡಾ.ನಾರಾಯಣಗೌಡ),
ಸಚಿವರು,
ಯುವ ಸಬಲೀಕರನ ಹಾಗೂ ಕ್ರೀಡೆ ಮತ್ತು
ಯೋಜನೆ, ಕಾರ್ಯಕ್ರಮ ಸಂಯೋಜನೆ
ಮತ್ತು ಸಾಂಖ್ಯಿಕ ಇಲಾಖೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ-700ರ ಅನುಬಂಧ-1

2018-19 ಮತ್ತು 2019-20ನೇ ಸಾಲಿನಲ್ಲಿ ಕರ್ನಾಟಕ ಶಾಸಕರ ಸ್ಥಳೀಯ ಪ್ರದೇಶಾಭಿವೃದ್ಧಿ ಯೋಜನೆಯಡಿಯಲ್ಲಿ ಜಿಲ್ಲಾಧಿಕಾರಿಗಳ ಪಿ.ಡಿ.ಖಾತೆಯಲ್ಲಿ ಬಾಕಿ ಇರುವ ಅನುದಾನದ ವಿವರ

(ರೂ.ಕೋಟಿಗಳಲ್ಲಿ)

ಕ್ರ. ಸಂ.	ಜಿಲ್ಲೆಯ ಹೆಸರು	ದಿನಾಂಕ:01.04.2019ರ ಅಂತ್ಯಕ್ಕೆ ಜಿಲ್ಲಾಧಿಕಾರಿಗಳ ಪಿ.ಡಿ.ಖಾತೆಯಲ್ಲಿ ಬಾಕಿ ಇರುವ ಅನುದಾನ	ದಿನಾಂಕ:01.04.2020ರ ಅಂತ್ಯಕ್ಕೆ ಜಿಲ್ಲಾಧಿಕಾರಿಗಳ ಪಿ.ಡಿ.ಖಾತೆಯಲ್ಲಿ ಬಾಕಿ ಇರುವ ಅನುದಾನ
1	2	3	4
1	ಬೆಂಗಳೂರು ನಗರ	110.56	79.79
2	ಬೆಂಗಳೂರು (ಗ್ರಾ)	10.51	14.88
3	ಚಿತ್ರದುರ್ಗ	31.74	19.92
4	ಕೋಲಾರ	23.92	23.75
5	ಚಿಕ್ಕಬಳ್ಳಾಪುರ	11.70	17.61
6	ರಾಮನಗರ	13.59	10.99
7	ತುಮಕೂರು	29.21	16.44
8	ದಾವಣಗೆರೆ	17.67	7.69
9	ಮೈಸೂರು	56.12	41.50
10	ಮಂಡ್ಯ	21.64	24.68
11	ಚಿಕ್ಕಮಗಳೂರು	21.30	9.74
12	ದಕ್ಷಿಣ ಕನ್ನಡ	20.59	17.42
13	ಉಡುಪಿ	15.77	15.31
14	ಕೊಡಗು	8.75	9.19
15	ಹಾಸನ	12.41	8.59
16	ಶಿವಮೊಗ್ಗ	37.07	23.72
17	ಚಾಮರಾಜನಗರ	16.56	12.97
18	ಕಲಬುರಗಿ	55.75	44.97
19	ಬೀದರ್	28.04	14.93
20	ರಾಯಚೂರು	34.37	20.63
21	ಕೊಪ್ಪಳ	8.08	12.95
22	ಬಳ್ಳಾರಿ	26.84	31.38
23	ಯಾದಗಿರಿ	18.98	24.22
24	ಬೆಳಗಾವಿ	151.62	37.59
25	ಧಾರವಾಡ	39.64	26.30
26	ಹಾವೇರಿ	25.36	23.04
27	ವಿಜಯಪುರ	27.68	21.61
28	ಬಾಗಲಕೋಟೆ	25.59	14.68
29	ಗದಗ	21.44	13.39
30	ಉತ್ತರ ಕನ್ನಡ	26.48	32.65
	ಒಟ್ಟು	**948.97**	**672.55**